ಕರಾಸಕೈಅನಿನಿ
ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
**ನೊಂದಾಯಿತ ಕಛೇರಿ:** ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ:080-23407011-25 ಇ-ಮೈಲ್:kssidcho@vsnl.com ವೆಬ್‌ಸೈಟ್:www.kssidc.co.in

ಸಂಖ್ಯೆ:ಸಮನ್ವಯ:ಕೈವ:ರಾ.ಬೆನ್ನೂರು:2ನೇ ಹಂತ:ನಿವೇಶನ:ಭೂದರ:ನಿಗದಿ:2016/1938. ದಿನಾಂಕ: 08-09-2016

## ಕಛೇರಿ ಆದೇಶ

**ವಿಷಯ:** ಹಾವೇರಿ ಜಿಲ್ಲೆಯ ರಾಣಿಬೆನ್ನೂರು ಕೈಗಾರಿಕಾ ವಸಾಹತು 2ನೇ ಹಂತದಲ್ಲಿನ ನಿವೇಶನ /ಜಮೀನಿನ ದರವನ್ನು ನಿಗದಿಪಡಿಸುವ ಬಗ್ಗೆ.

ಉಲ್ಲೇಖ:
1) ಕಛೇರಿ ಆದೇಶ ಸಂಖ್ಯೆ ಸಮನ್ವಯ:ಜಮೀನಿನ ದರ:ಪರಿಷ್ಕರಣೆ:2012-14/3402 ದಿನಾಂಕ 10.12.2012.
2) ಕಛೇರಿ ಆದೇಶ ಸಂಖ್ಯೆ ಸಮನ್ವಯ:ಜಮೀನಿನ ದರ ಪರಿಷ್ಕರಣೆ / 2015-16/849 ದಿನಾಂಕ 11.06.2015
3) ಹಂಚಿಕೆ ಪತ್ರಿಕಾ ಪ್ರಕಟಣೆ ಸಂಖ್ಯೆ:ಸಮನ್ವಯ:ಮಳಿಗೆ/ನಿವೇಶನ:ಹಂಚಿಕೆ ಪ್ರಕಟಣೆ: 2015 ದಿನಾಂಕ 24.08.2015.
4) ಸಂಬಂಧಪಟ್ಟ ಕಡತದಲ್ಲಿನ ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರ ಅನುಮೋದನೆ ದಿನಾಂಕ 01-08-2016

-------

**ಪ್ರಸ್ತಾವನೆ:**

ನಿಗಮದಿಂದ ಹಾವೇರಿ ಜಿಲ್ಲೆಯಲ್ಲಿನ ರಾಣಿಬೆನ್ನೂರಿನಲ್ಲಿ 2ನೇ ಹಂತದ ಕೈಗಾರಿಕಾ ವಸಾಹತು ಸ್ಥಾಪನೆ ಹಾಗೂ ಅಭಿವೃದ್ಧಿ ಸಲುವಾಗಿ 10.00 ಎಕರೆ ಜಮೀನನ್ನು ರೇಷ್ಮೆ ಇಲಾಖೆಯಿಂದ ಭೂಸ್ವಾಧೀನ ಪಡಿಸಿಕೊಂಡು, 2012-13ರಲ್ಲಿ ಅವಶ್ಯ ಮೂಲಭೂತ ಸೌಕರ್ಯಗಳನ್ನೊಳಗೊಂಡ ಕೈಗಾರಿಕಾ ವಸಾಹತುವನ್ನು ಸ್ಥಾಪಿಸಲಾಗಿದ್ದು, ಸದರಿ ವಸಾಹತುವಿನಲ್ಲಿ ಒಟ್ಟು 48 ಸಂಖ್ಯೆ ವಿವಿಧ ಅಳತೆಯ ಕೈಗಾರಿಕಾ ನಿವೇಶನಗಳನ್ನು ಅಭಿವೃದ್ಧಿಪಡಿಸಲಾಗಿದೆ, ಸದರಿ ನಿವೇಶನಗಳನ್ನು ಹೊಸದಾಗಿ ಹಂಚಿಕೆ ಮಾಡಬೇಕಿದ್ದ ಹಿನ್ನೆಲೆಯಲ್ಲಿ, ಉಲ್ಲೇಖ (1) ಹಾಗೂ (2)ರಲ್ಲಿ ಓದಲಾಗಿರುವ ನಿವೇಶನ / ಜಮೀನಿನ ದರ ಪರಿಷ್ಕರಣೆ ಕಛೇರಿ ಆದೇಶಗಳಲ್ಲಿ ಸದರಿ ರಾಣಿಬೆನ್ನೂರು ಕೈಗಾರಿಕಾ ವಸಾಹತು 2ನೇ ಹಂತದ ನಿವೇಶನ / ಜಮೀನಿಗೆ ಯಾವುದೇ ಭೂದರವನ್ನು ನಿಗದಿಪಡಿಸಿರುವುದಿಲ್ಲ. ಆದಾಗ್ಯೂ, ನಿಗಮದ ಹೊಸ ಕೈಗಾರಿಕಾ ವಸಾಹತುಗಳ ನಿವೇಶನ/ಜಮೀನಿನ ದರವನ್ನು ನಿಗಮದ ಮಂಡಳಿಯ ಕಾರ್ಯನೀತಿ ನಿರ್ಣಯದನ್ವಯ, ನಿವೇಶನ/ಜಮೀನಿನ ದರವನ್ನು ಲೆಕ್ಕಾಚಾರ ಮಾಡಿ, ನಿಗದಿಪಡಿಸಿದ ನಿವೇಶನ / ಜಮೀನಿನ ದರದ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರವರ ಅನುಮೋದನೆಗೆ ಸಲ್ಲಿಸುವಂತೆ ತೀರ್ಮಾನಿಸಲಾಗಿತ್ತು.

ನಿವೇಶನಗಳ ಹಂಚಿಕೆಯಿಂದಾಗಿ, ನಿಗಮಕ್ಕೆ ಆದಾಯವನ್ನು ಗಳಿಸುವ ಉದ್ದೇಶದಿಂದ ಕೈಗಾರಿಕಾ ವಸಾಹತು, ರಾಣಿಬೆನ್ನೂರು 2ನೇ ಹಂತದಲ್ಲಿನ ಮಾರಾಟ ಮಾಡಬಹುದಾದ ನಿವೇಶನಗಳ ಒಟ್ಟು ಕ್ಷೇತ್ರವು 24775.80 ಚದರ ಮೀಟರ್‌ಗಳೆಂದು ಪರಿಗಣಿಸಿ, ಲಭ್ಯವಿರುವ ನಿವೇಶನಗಳ ಹಂಚಿಕೆಗಾಗಿ ದಿನಾಂಕ 24.08.2015 ರಂದು ಹಂಚಿಕಾ ಪ್ರಕಟಣೆಯನ್ನು ನೀಡಿ, ಸದರಿ ಕೈಗಾರಿಕಾ ವಸಾಹತುವಿನಲ್ಲಿನ ನಿವೇಶನ / ಜಮೀನಿನ ದರವನ್ನು ತಾತ್ಕಾಲಿಕವಾಗಿ ಪ್ರತಿ ಚ.ಮೀ.ಗೆ **ರೂ.2500/-** ಗಳೆಂದು ನಮೂದಿಸಲಾಗಿತ್ತು.

...2..

ಸದರಿ ಹಂಚಿಕೆ ಪ್ರಕಟಣೆಗೆ ಎದುರಾಗಿ ಆಸಕ್ತ ಭಾವೀ ಉದ್ದಿಮೆದಾರರುಗಳಿಂದ ಸಾಕಷ್ಟು ಸಕಾರಾತ್ಮಕ ಪ್ರತಿಕ್ರಿಯೆ ಬಂದಿರುವ ಹಿನ್ನೆಲೆಯಲ್ಲಿ ಹಾಗೂ ರಾಣಿಬೆನ್ನೂರು 2ನೇ ಹಂತದ ಕೈಗಾರಿಕಾ ವಸಾಹತು ಸುತ್ತಮುತ್ತಲಿನ ಭೂಮಿಯ ಮಾರ್ಗಸೂಚಿ ದರವನ್ನು ಪರಿಗಣಿಸಿ ಮತ್ತು ನಿಗಮಕ್ಕೆ ಆರ್ಥಿಕವಾಗಿ ಹೆಚ್ಚುವರಿ ಆದಾಯ ಬರುವ ಅಂಶವನ್ನು ಗಮನದಲ್ಲಿಟ್ಟುಕೊಂಡು ಭೂದರವನ್ನು ಪ್ರತಿ ಚದರ ಮೀಟರ್‌ಗೆ **ರೂ.2,800/-**ಗಳಿಗೆ ನಿಗದಿಪಡಿಸಲು ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರು ತಮ್ಮ ಅನುಮೋದನೆ ನೀಡಿರುತ್ತಾರೆ. ಅದರಂತೆ ಕೆಳಗಿನ ಆದೇಶ.

## ಆ ದೇ ಶ

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟಿರುವ ವಿವಿಧ ಅಂಶಗಳ ಹಿನ್ನೆಲೆಯಲ್ಲಿ, ಹಾವೇರಿ ಜಿಲ್ಲೆಯಲ್ಲಿ ನಿಗಮದಿಂದ ಸ್ಥಾಪಿಸಲ್ಪಟ್ಟಿರುವ **ರಾಣೆಬೆನ್ನೂರು 2ನೇ ಹಂತದ ಕೈಗಾರಿಕಾ ವಸಾಹತುವಿನಲ್ಲಿನ ನಿವೇಶನ / ಜಮೀನಿನ ದರವನ್ನು ಪ್ರತಿ ಚದರ ಮೀಟರ್ ಒಂದಕ್ಕೆ ರೂ.2,800/- (ರೂಪಾಯಿ ಎರಡು ಸಾವಿರದ ಎಂಟು ನೂರು ಮಾತ್ರ) ಗಳಿಗೆ ನಿಗದಿಪಡಿಸಲಾಗಿದೆ.**

ಸದರಿ ಆದೇಶವು **'ತಕ್ಷಣದಿಂದ'** ಹಾಗೂ **'ಮುಂದಿನ ಆದೇಶ'** ಹೊರಡಿಸುವವರೆವಿಗೂ ಜಾರಿಯಲ್ಲಿರುತ್ತದೆ.

ಪ್ರಧಾನ ವ್ಯವಸ್ಥಾಪಕರು(ಕೈವ&ಹಣಕಾಸು)

ಗೆ,

1) ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ)/(ವ&ಕಾಲೆ), ಕರಾಸಕೈಅನಿನಿ, ಬೆಂಗಳೂರು / ಹುಬ್ಬಳ್ಳಿ ಮಾಹಿತಿಗಾಗಿ ಹಾಗೂ ಅವಶ್ಯ ಕ್ರಮಗಳಿಗಾಗಿ.
2) ಉಪ ಪ್ರಧಾನ ವ್ಯವಸ್ಥಾಪಕರು(ಕೈವ)ವ-2/(ಹಣಕಾಸು), ಕರಾಸಕೈಅನಿನಿ, ಬೆಂಗಳೂರು/ಹುಬ್ಬಳ್ಳಿ ಇವರ ಮಾಹಿತಿಗಾಗಿ ಹಾಗೂ ಅವಶ್ಯ ಕ್ರಮಗಳಿಗಾಗಿ.

ಪ್ರತಿ:

1) ವ್ಯವಸ್ಥಾಪಕ ನಿರ್ದೇಶಕರು, ಕರಾಸಕೈಅನಿನಿ, ಬೆಂಗಳೂರು ಬೆಂಗಳೂರು ಇವರ ಅಮೂಲ್ಯ ಮಾಹಿತಿಗಾಗಿ ಸಲ್ಲಿಸಲಾಗಿದೆ.
2) ಪ್ರಧಾನ ವ್ಯವಸ್ಥಾಪಕರು(ಆಡಳಿತ&ಭೂಸ್ವಾಧೀನ)/(ವಾಣಿಜ್ಯ), ಕರಾಸಕೈಅನಿನಿ, ಬೆಂಗಳೂರು ಇವರ ಮಾಹಿತಿಗಾಗಿ.
3) ಉಪ ಪ್ರಧಾನ ವ್ಯವಸ್ಥಾಪಕರು(ಆ.ಲೆ.ಪ), ಕರಾಸಕೈಅನಿನಿ, ಬೆಂಗಳೂರು ಇವರ ಮಾಹಿತಿಗಾಗಿ.
4) ವ್ಯವಸ್ಥಾಪಕರು(ಗಣಕಯಂತ್ರ), ಕರಾಸಕೈಅನಿನಿ, ಬೆಂಗಳೂರು ಇವರ ಮಾಹಿತಿಗಾಗಿ ಮತ್ತು ನಿಗಮದ ವೆಬ್‌ಸೈಟ್‌ನಲ್ಲಿ ಅಡಕಗೊಳಿಸಲು.